> ಒಂದು ಅರ್ಥವಾಗ್ತಿಲ್ಲ ಸಾಹೇಬ್ರೆ. ಅಜಿತ್ ಕುಡಿಯೋಕೆ ಕಾಸು ತೆಗೀತಿದ್ದಾನೆಯೆ? ಯಜಮಾನರಿಗೆ ಮರೆವೆ? ಯಜಮಾನ್ತಿಯವರು ಜ್ಯುವೆಲ್ಲರಿಗೆ ಕಾಸು ಕೊಡುವುದು ಯಜಮಾನರಿಗೆ ಗೊತ್ತಾಗಬಾರದು ಅನ್ನುವುದೇಕೆ? ಯಜಮಾನ್ತಿಯವರು ನನ್ನಲ್ಲಿ ಹಣ ಕೊಟ್ಟು, ಲಕ್ಷ್ಮೀ ಜ್ಯೂವೆಲ್ಲರಿಗೆ ಕೊಟ್ಟು ಬರಲು ಹೇಳ್ತಾರೆ. ಆದರೆ ಯಜಮಾನರಿಗೆ ಗೊತ್ತಾಗಬಾರದು ಅಂತಾರೆ. ಅದು ಯಾಕೆ?

"ಅಜಿತನ ಕೋಣೆ ನೋಡೋಣ."

"ಬೇಗ ಮುಗಿಸಿ. ಅವ್ನು ಹೊರಗಡೆ ಹೋಗಿದಾನೆ. ಹಣ ಕಳವಾಗಿದ್ದು ನನ್ಗೆ ಗೊತ್ತಾಗಿದೆ ಎಂದು ಅವ್ನಿಗೆ ತಿಳಿಸಿಲ್ಲ."

ಆತನ ಕೋಣೆ ಅಚ್ಚುಕಟ್ಟಾಗಿತ್ತು. ಮೇಜಿನ ಸೆಳೆಖಾನೆ ಎಳೆದು ನಾನು ಪರಿಶೀಲನೆಗೆ ತೊಡಗಿದೆ. ಕರಮಚಂದನ ಕಣ್ಣುಗಳು ಅಂಗುಲವೂ ಬಿಡದಂತೆ ಅಳೆದವು...ಪರ್ಸ್ ಮಾತ್ರ ಕಾಣಲಿಲ್ಲ! ಕೋಣೆಯ ಹೊರಗೆ ಬಂದ ಕರಮಚಂದ ಬಾಗಿಲ ಬಳಿ ನಿಂತು ಸುತ್ತಲೂ ಪರಿಶೀಲಕ ದೃಷ್ಟಿ ಬೀರಿದ. ಹಜಾರದ ಆ ಕೊನೆಯಲ್ಲಿ, ಬಾಗಿಲಿಗೆ ಎದುರಾಗಿದ್ದ ಕಿಟಕಿಯಿಂದ, ದೇವಸ್ಥಾನಕ್ಕೆ ಹೋಗುವ ಹಾದಿ ಕಾಣಿಸುತ್ತಿತ್ತು. ಏನೋ ಲೆಕ್ಕ ಹಾಕಿದ ಕರಮಚಂದ, ಮೆಲ್ಲನೆ ಜರುಗಿ, ಮುಚ್ಚಿದ್ದ ಬಾಗಿಲಿಗೆ ಬೆನ್ನು ತಾಗಿಸಿ ನಿಂತು ನಿಟ್ಟಿಸಿದ. ಮತ್ತೆ ಅಜಿತನ ಕೋಣೆಯ ಬಾಗಿಲು ಮುಚ್ಚಿ, ಅದರೆದುರು ನಿಂತು ನಿರುಕಿಸಿದ. ಅವನ ಮೊಗದಲ್ಲಿ ಕಿರುನಗು. ನನಗೆ ಆತನ ನಡತೆ ವಿಚಿತ್ರವಾಗಿ ಕಾಣಿಸಿತು.

"ನಿಮ್ಮ ಮಗಳು ಎಲ್ಲಿ, ಬೋಪಣ್ಣ?"

ಮೈಥಿಲಿ ಜೊತೆ ನಾವು ಪ್ರತ್ಯೇಕವಾಗಿ ಸಂಭಾಷಿಸಿದೆವು. ಎರಡನೇ ವರ್ಷದ ವಾಣಿಜ್ಯ ವಿದ್ಯಾರ್ಥಿನಿಯಾದ ಆಕೆ ಚುರುಕಿನ ಹುಡುಗಿ.

"ಅಣ್ಣನಿಗೆ ಹಾಳು ಕುಡಿತದ ದುರಭ್ಯಾಸ. ಕೆಲ್ಸ ಸಿಕ್ಕದಿದ್ದುದರಿಂದ ಡಿಪ್ರೆಶನ್ನು. ಅಪ್ಪ ನಿವೃತ್ತಿಯಾಗುವಾಗ, ಗೋಣಿಕೊಪ್ಪದಲ್ಲಿದ್ದೆವು. ಅಲ್ಲಿವರೆಗೂ, ಆತ ಹಣ ಕದ್ದಂತಹ ಉದಾಹರಣೆ ಇಲ್ಲ. ಇಲ್ಲಿಗೆ ಬಂದ್ ಮೇಲೆ ಶುರು ಹಚ್ಚಿಕೊಂಡಿರಬೇಕು. ಕುಡಿಯೋ ಅಭ್ಯಾಸ ಎಂಜಿನಿಯರಿಂಗ್ ಕಲೀವಾಗ್ಲೇ ಅಂಟಿಸ್ಕೊಂಡ. ಆಮೇಲೆ ಕೆಲ್ಸ ಸಿಕ್ಕದಿದ್ದಾಗ ಅದು ಜಾಸ್ತಿಯಾಯ್ತು."

"ನಿಮ್ಮಪ್ಪನಿಗೆ ಮನೋರೋಗ ಅಂತ ನಿನ್ನಣ್ಣ ಹೇಳ್ದ!"

"ಅದೂ ಇರಬಹ್ದು. ಅಣ್ಣನಿಗೆ ಕೆಲ್ಸ ಸಿಗದೇ ಇರೋದು, ಇನ್ನೂ ಮುಗಿಯದ ಇಲಾಖಾ ವಿಚಾರಣೆ! ಅಪ್ಪನ ಮೇಲೆ ಒತ್ತಡ ಉಂಟು ಮಾಡಿರಬಹುದು."

ಮುಗಿಯದ ಇಲಾಖೆಯ ತನಿಖೆ! ಬೋಪಣ್ಣ ನಮಗೆ ಹೇಳಿರಲೇ ಇಲ್ಲ!!

"ಯಾವ್ದೋ ಯೋಜನೆಲಿ ಅವ್ಯವಹಾರ ಆಗಿದೆಯಂತ ಅಪ್ಪನ ಮೇಲೆ ಸುಳ್ಳು ಕೇಸು ಹಾಕಿದ್ದಾರೆ. ತನಿಖೆ ಮುಗಿಯುವರೆಗೆ ಫಿಫ್ಟೀ ಪರ್ಸೆಂಟು ಪೆನ್ಶನ್ ಬರೋದು. ಹಣದ ತಾಪತ್ರಯ. ಅದ್ಕೇ ಬಾಡಿಗೆ ಕಮ್ಮಿ ಅಂತ ಸಿಟಿಯಿಂದ ದೂರ ಇರೋ ಈ ಮನೆ ಹಿಡಿದ್ವಿ. ಇಲ್ಲಿ ಬಂದ ಮೇಲೆ ಹೊಸದೇ ಸಮಸ್ಯೆ ಶುರುವಾಗಿದೆ."